# ಇಲ್ಲೊಂದು 'ವೆನಿಸಿನ ವ್ಯಾಪಾರಿ' ಕಥೆ

ಇತ್ತೀಚೆಗೆ ಉಡುಪಿಯ ಪೇಜಾವರ ಶ್ರೀಗಳು 'ಜಾತಿ ವ್ಯವಸ್ಥೆ ಉಳಿಯಲಿ, ಅಸ್ಪೃಶ್ಯತೆ ಹೋಗಲಿ' ಎಂಬ ಹೇಳಿಕೆ ನೀಡಿದ್ದಾರೆ. ವರ್ಣ, ಜಾತಿ, ಅಸ್ಪೃಶ್ಯತೆ ಇವುಗಳ ಕಳ್ಳುಬಳ್ಳಿ ಸಂಬಂಧ ಅವರಿಗೆ ತಿಳಿದಿಲ್ಲವೆಂದಲ್ಲ. ಈ ಮೂರೂ ಸಂಗತಿಗಳಿಗೆ ಏಕ ಘಟಕವಾಗಿ ಸ್ವತಂತ್ರ ಅಸ್ತಿತ್ವವಿಲ್ಲ. ಯಾವುದೇ ರೀತಿಯ ವಿಭಜನೆ ಮರು ವಿಭಜನೆಯ ಮೊಳಕೆಯೊಂದಿಗೇ ಹುಟ್ಟುತ್ತದೆ. ವರ್ಣದ ವಿಭಜನೆಯಲ್ಲಿಯೆ ಜಾತಿಯ ಹುಟ್ಟು ಅಡಗಿದೆ. ವಿಭಜನೆ ಸಮಾನ ರೇಖೆಯಲ್ಲಿದ್ದರೆ ಅವು ವರ್ಗಗಳಾಗುತ್ತಿದ್ದವು. ಅದು ಲಂಬ ರೇಖೆಯಲ್ಲಿರುವುದರಿಂದ ಜಾತಿಗಳಾಗಿವೆ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಂಶೋಧನೆಯ ಪ್ರಕಾರ ಬೌದ್ಧರಾಗಿದ್ದವರು ಅಂದು ಘರ್ ವಾಪಸಿಗೆ ಒಪ್ಪಲಿಲ್ಲವಾಗಿ ಶ್ರೇಣೀಕರಣದ ಕೊನೆಗೆ ತಳ್ಳಲ್ಪಟ್ಟರು. ಬೀಫ್ ಅವರ ಖಾದ್ಯವಾಗಿದ್ದದ್ದು ಅನುಷಂಗಿಕ. ಅವರಿಗೆ ಊರ ಕೊಳೆಯನ್ನು ತೊಳೆಯಲು ನೇಮಿಸಿ ಹೊರಗಿಟ್ಟು ಅಸ್ಪೃಶ್ಯತೆಯ ಶಿಕ್ಷೆಯನ್ನು ಹೇರಲಾಯಿತು. ಆದ್ದರಿಂದಲೇ 'ಅಸ್ಪೃಶ್ಯತೆಯ ಬೇರು ಜಾತಿ ವ್ಯವಸ್ಥೆಯಲ್ಲಿದೆ, ಜಾತಿ ವ್ಯವಸ್ಥೆಯ ಬೇರು ವರ್ಣಾಶ್ರಮ ಧರ್ಮದಲ್ಲಿದೆ. ವರ್ಣಾಶ್ರಮ ಧರ್ಮದ ಬೇರು ಬ್ರಾಹ್ಮಣವಾದವಾಗಿದೆ, ಬ್ರಾಹ್ಮಣವಾದದ ಬೇರು ಅವರ ರಾಜಕೀಯ ಅಧಿಕಾರದಲ್ಲಿದೆ' ಎಂದು ಬಾಬಾಸಾಹೇಬರು ಹೇಳಿದರು.

ದಕ್ಷಿಣ ಆಫ್ರಿಕಾದಿಂದ ಬಂದ ತರುಣ್ಯದಲ್ಲಿಯೆ ಅಂದರೆ 1920 ರಲ್ಲಿ ಗಾಂಧೀಜಿ ವರ್ಣವ್ಯವಸ್ಥೆಯನ್ನು ಬಲವಾಗಿ ಸಮರ್ಥಿಸಿಕೊಂಡು ಜಾತಿ ಪದ್ಧತಿ ಬೇಡವೆಂದಿದ್ದರು. 'ಜಾತಿ ವ್ಯವಸ್ಥೆಯು ಹಿಂದುಧರ್ಮವನ್ನು ವಿಚ್ಛಿದ್ರಗೊಳ್ಳದಂತೆ ತಡೆದು ನಿಲ್ಲಿಸಿದೆ. ಆದರೆ ಎಲ್ಲ ವ್ಯವಸ್ಥೆಗಳಂತೆ ಜಾತಿವ್ಯವಸ್ಥೆಯೂ ದುಷ್ಟ ಬೆಳವಣಿಗೆಗಳಿಂದ ವಿರೂಪಗೊಂಡಿದೆ. ನಾಲ್ಕು ವರ್ಣಗಳು ಮಾತ್ರವೇ ಮೌಲಿಕ, ನೈಸರ್ಗಿಕ ಮತ್ತು ಅಗತ್ಯವಾದ ವಿಭಜನೆಯೆಂದು ನಾನು ಪರಿಗಣಿಸುತ್ತೇನೆ'. ಎಂದು ಹೇಳಿದ್ದರು. ಆದರೆ ಅತಿ ಅಲ್ಪ ಕಾಲದಲ್ಲಿಯೇ ಅಂದರೆ 1922ರಲ್ಲಿ ಈ ಭಾವನೆ ಬದಲಾಯಿತು. 'ಜಾತಿಪದ್ಧತಿಯಂಥ ವ್ಯವಸ್ಥೆಯನ್ನು ರೂಪುಗೊಳಿಸಿಕೊಳ್ಳಬಲ್ಲ ಸಮುದಾಯವು ಸಂಘಟನೆಯ ಅಪೂರ್ವ ಶಕ್ತಿಯನ್ನು ಹೊಂದಿದೆಯೆಂದೇ ಗಣಿಸಬೇಕಾಗುತ್ತದೆ.. ಜಾತಿಪದ್ಧತಿಯು ಸಮಾಜದ ನೈಸರ್ಗಿಕ ನಿಯಮ. ಜಾತಿಪದ್ಧತಿಯನ್ನು ನಿರ್ನಾಮ ಮಾಡುತ್ತೇನೆಂದು ಬದ್ಧರಾಗಿ ಹೊರಟವರೆಲ್ಲರಿಗೂ ನಾನು ವಿರೋಧಿ.' ಇದು ಅಂದು ಬದಲಾದ ಅವರ ಮಾತು.

ವರ್ಣವ್ಯವಸ್ಥೆ ಮತ್ತು ಜಾತಿಪದ್ಧತಿಯ ನಿರಾಕರಣೆ ಹಿಂದೂ ಧರ್ಮದ ನಾಶ ಎಂದು ಅವರು ಭಾವಿಸಿದ್ದರು. ಮೇಲು– ಕೀಳೆನಿಸುವ, ಅಸಮಾನತೆಯನ್ನು ಪೋಷಿಸುವ, ಅಕ್ಷರ, ಅಧಿಕಾರಗಳನ್ನು ಎಲ್ಲರಿಗೂ ಕೊಡಬಯಸದ ಜಾತಿಪದ್ಧತಿ ಅತ್ಯಂತ ನೀಚ ಸಾಮಾಜಿಕ ವ್ಯವಸ್ಥೆ ಎಂಬುದು ಎಲ್ಲ ಸಮಾಜ ವಿಜ್ಞಾನಿಗಳ ಅಭಿಪ್ರಾಯವಾಗಿದೆ. ಇಂತಹ ಮೇಲ್ನೋಟದ ಸಾಮಾನ್ಯ ಹೊಳಹುಗಳಿಗೆ ಗಾಂಧಿ ವಿಮುಖರಾದದ್ದು ಹೇಗೆ ಎಂಬುದು ಚರ್ಚಾಸ್ಪದವಾಗಿಯೇ ಉಳಿದಿದೆ. ನಾವು ಏನನ್ನೋ ಕಳೆದುಕೊಳ್ಳುತ್ತಿದ್ದೇವೆ ಅನಿಸಿಬಿಟ್ಟರೆ ವಿವೇಚನೆ ಮಂಕಾಗಿ ಬಿಡುತ್ತದೆ. ಇಂತಹ ಅಭಿಪ್ರಾಯಗಳನ್ನು ಹೊಂದಿದ್ದ ಗಾಂಧಿ 1945 ರ ಹೊತ್ತಿಗೆ ಸಂಪೂರ್ಣ ಬದಲಾಗಿ 'ಸವರ್ಣ ಹಿಂದು ಮತ್ತು ಹರಿಜನ ಮದುವೆಗೆ ಮಾತ್ರ ನಾನು ಬರುತ್ತೇನೆ, ಆಶೀರ್ವಾದ ಮಾಡುತ್ತೇನೆ' ಎನ್ನುವ ಹಂತಕ್ಕೆ ತಲುಪಿದರು.

ಬಸವಣ್ಣ, ಅಂಬೇಡ್ಕರ್ ಇವರಲ್ಲಿ ಇಂತಹ ಗೊಂದಲಗಳಿಗೆ ಜಾಗವೇ ಇರಲಿಲ್ಲ. ಮೊದಲ ಆಲೋಚನೆಯಲ್ಲಿಯೆ ಅವರದು ಸ್ಪಷ್ಟ ತೀರ್ಪು. ನುಡಿದದ್ದೆಲ್ಲ ಮುತ್ತಿನ ಹಾರ, ಸ್ಫಟಿಕದ ಸಲಾಕೆ. ದಾರ್ಶನಿಕರ ಒಳನೋಟಕ್ಕೆ ಒಂದು ಚಿರಂತನತೆ ಪ್ರಾಪ್ತಿಯಾಗುತ್ತದೆ. ಜಾತಿವಿನಾಶಕ್ಕೆ ಒಂದೇ ಪರಿಹಾರವೆಂದರೆ ಬಸವಣ್ಣ ಮಾಡಿ ತೋರಿದಂತೆ ಅಂತರ್ಜಾತೀಯ ವಿವಾಹ. ಅದರಲ್ಲಿ ಬಡತನಕ್ಕೂ ಪರಿಹಾರವಿದೆ. ಅಂತರ್ಜಾತೀಯ ವಿವಾಹದಿಂದ ಸಂಪತ್ತಿನ ಮರುಹಂಚಿಕೆ ಸಾಧ್ಯವಾಗುತ್ತದೆ. ಸಗೋತ್ರದಿಂದ ದೂರವಾಗುವ ಕಾರಣದಿಂದ ಸರಾಸರಿ ಬುದ್ಧಿಮತ್ತೆ ಹೆಚ್ಚಾಗುವ ಸಾಧ್ಯತೆ ಇರುತ್ತದೆ ಎಂಬುದು ಜೀವವಿಜ್ಞಾನಿಗಳ ಅಭಿಪ್ರಾಯವಾಗಿದೆ. ಆದರೆ ಜಾತಿವಾದಿಗಳು ಅಂತರ್ಜಾತೀಯ ವಿವಾಹದಿಂದ ಹುಟ್ಟುವ ಮಗುವಿಗೆ ಪಿತೃಪ್ರಧಾನ ವ್ಯವಸ್ಥೆಯ ನೆಪವೊಡ್ಡಿ ತಂದೆಯ ಜಾತಿಯನ್ನು ನೀಡುತ್ತಿದ್ದಾರೆ. ಅಂಥವರು ಕೇವಲ 'ಹಿಂದು' ಎಂದು ಬರೆಸಿಕೊಂಡರೆ ಜಾತಿಯ ಕಳಂಕದಿಂದ ಪಾರಾಗಬಹುದು, ಜಾತಿರಹಿತ 'ಹಿಂದು', ಧರ್ಮದ ಘನತೆಯನ್ನು ಹೆಚ್ಚಿಸಬಹುದು.

ಜಾತಿ ಪದ್ಧತಿ ಉಳಿಯಲಿ ಎಂದರೆ ಬ್ರಾಹ್ಮಣ್ಯ ಉಳಿಯಲಿ ಎಂದೇ ಅರ್ಥ. ದೇವರಿಗೆ ಹತ್ತಿರವಿರುವ ಶ್ರೇಷ್ಠತೆಯ ವ್ಯಸನ ಒಬ್ಬನಿಗೆ ಇರುವವರೆಗೆ ದೇಗುಲವನ್ನು ಪ್ರವೇಶಿಸಲಾಗದ ಕಟ್ಟಕಡೆಯ ಜಾತಿಯವನೊಬ್ಬ ಇದ್ದೇ ಇರುತ್ತಾನೆ. ಶೇಕ್ಸ್‌ಪಿಯರ್‌ನ 'ಮರ್ಚೆಂಟ್ ಆಫ್ ವೆನಿಸ್' ನಾಟಕದ ಪ್ರಸಿದ್ಧ ರೂಪಕವನ್ನು ಸ್ವಲ್ಪ ಬದಲಾಯಿಸಿ ಹೇಳುವುದಾದರೆ ಅಸ್ಪೃಶ್ಯತೆ ಸ್ಪರ್ಶಕ್ಕೆ ಅಂದರೆ ಚರ್ಮಕ್ಕೆ ಸಂಬಂಧಿಸಿದ್ದು. ಆದ್ದರಿಂದ ಚರ್ಮವನ್ನು ತೆಗೆದುಬಿಡೋಣ. ಜಾತಿ ರಕ್ತ ಸಂಬಂಧಗಳ ಮುಂದುವರಿಕೆ, ಆದ್ದರಿಂದ ಜಾತಿಯೆಂದರೆ ರಕ್ತ. ಅದು ಜೈವಿಕವಾಗಿ ತಲೆಯಿಂದ ತಲೆಮಾರಿಗೆ ಹರಿದುಬರುವುದರಿಂದ ಅದನ್ನು ಉಳಿಸಿಕೊಳ್ಳೋಣ. ಈಗ ಒಂದು ಹನಿ ರಕ್ತ ಬೀಳದಂತೆ ಚರ್ಮವನ್ನು ತೆಗೆದುಬಿಡುವ ಜವಾಬ್ದಾರಿ ಪೇಜಾವರಶ್ರೀಗಳ ಮೇಲಿದೆ.

■ ಮೂಚಿ

## ಮಾತೇ ಮುತ್ತು

★ ಪ್ರಾರ್ಥನೆ ಎಂದರೆ ಬೇಡುವುದಲ್ಲ, ಆತ್ಮವನ್ನು ಸಂತೈಸುವುದು. ಪ್ರತಿದಿನವೂ ನಮ್ಮ ದೌರ್ಬಲ್ಯಗಳನ್ನು ಒಪ್ಪಿಸಿಕೊಳ್ಳುವುದು. ಪ್ರಾರ್ಥನೆಯಲ್ಲಿ ಹೃದಯರಹಿತ ಶಬ್ದಗಳ ಬದಲಾಗಿ, ಶಬ್ದರಹಿತ ಹೃದಯವಿರಲಿ.
–ಮಹಾತ್ಮ ಗಾಂಧೀಜಿ

★ ಎಲ್ಲಾದರೂ ಒಂದು ಕಡೆ ಅನ್ಯಾಯವಾದರೂ, ಅದು ನ್ಯಾಯಕ್ಕೆ ಎಲ್ಲ ಕಡೆ ಅಪಾಯ ಒಡ್ಡುತ್ತದೆ.
–ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್

★ ಸಾವಿರ ಯುದ್ಧಗಳನ್ನು ಗೆಲ್ಲುವುದಕ್ಕಿಂತ ನಿಮ್ಮನ್ನು ನೀವು ಗೆಲ್ಲುವುದು ಒಳ್ಳೆಯದು.
–ಗೌತಮ ಬುದ್ಧ

★ ಪ್ರತಿಯೊಬ್ಬನಿಗೂ ತನ್ನ ಸ್ವಂತ ಅದೃಷ್ಟವನ್ನು ನಿರ್ಧರಿಸುವ ಹಕ್ಕಿದೆ.
–ಬಾಬ್ ಮಾರ್ಲೆ

★ ನೀವು ಏನನ್ನು ಮಾಡುತ್ತಿದ್ದೀರೋ ಅದನ್ನು ಶ್ರೇಷ್ಠ ಕೆಲಸವೆಂದು ಭಾವಿಸಿ. ಶ್ರೇಷ್ಠ ಕೆಲಸವನ್ನು ಮಾಡುವ ಏಕೈಕ ವಿಧಾನವೆಂದರೆ ಆ ಕೆಲಸವನ್ನು ಪ್ರೀತಿಸುವುದು.
–ಸ್ಟೀವ್ ಜಾಬ್ಸ್

★ ಪ್ರತಿರೋಧಗಳನ್ನು ಬಹುತೇಕ ಎಲ್ಲರೂ ಎದುರಿಸುತ್ತಾರೆ. ಆದರೆ ಒಬ್ಬನ ನೈತಿಕತೆಯನ್ನು ಪರೀಕ್ಷಿಸಬೇಕಿದ್ದರೆ ಆತನಿಗೆ ಅಧಿಕಾರ ಕೊಟ್ಟುನೋಡಿ.
–ಅಬ್ರಹಾಂ ಲಿಂಕನ್

★ ಜೀವನ ಎಂದರೆ ನಿಮ್ಮನ್ನು ನೀವು ಕಂಡುಕೊಳ್ಳುವುದಲ್ಲ, ನಿಮ್ಮನ್ನು ನೀವು ಸೃಷ್ಟಿಸಿಕೊಳ್ಳುವುದು.
–ಬರ್ನಾರ್ಡ್ ಷಾ

★ ನಿಮ್ಮ ಅಜ್ಞಾನವನ್ನು ತಿಳಿದುಕೊಳ್ಳಲೂ ನಿಮಗೆ ಸಾಕಷ್ಟು ಜ್ಞಾನ ಇರಬೇಕಾಗುತ್ತದೆ.
–ಥಾಮಸ್ ಸೋವೆಲ್

★ ಒಳ್ಳೆಯ ಪುಸ್ತಕಗಳು, ಒಳ್ಳೆಯ ಸ್ನೇಹಿತರು ಮತ್ತು ನಿದ್ರಿಸುತ್ತಿರುವ ಆತ್ಮಸಾಕ್ಷಿ. ಇದುವೇ ಆದರ್ಶಮಯ ಜೀವನ.
–ಮಾರ್ಕ್ ಟ್ವೈನ್

★ ಜೀವನವನ್ನು ಹತ್ತಿರದಿಂದ ನೋಡಿದರೆ ದುರಂತ; ದೂರದಿಂದ ನೋಡಿದರೆ ತಮಾಷೆ.
–ಚಾರ್ಲಿ ಚಾಪ್ಲಿನ್

★ ಬದುಕುವುದು ಎಂದರೆ ಬದಲಾಗುವುದು. ಅದರಲ್ಲೂ ಪರಿಪೂರ್ಣತೆ ಸಾಧಿಸಬೇಕೆಂದರೆ ಆಗಾಗ್ಗೆ ಬದಲಾಗುತ್ತಿರಬೇಕು.
–ಜಾನ್ ಹೆನ್ರಿ ನ್ಯೂಮನ್